



**ನೇಪಾಳಕ್ಕೆ ಪ್ರವಾಸ ಹೋಗುವುದಾದಲ್ಲಿ ಕಠ್ಮಂಡುವಿನಿಂದ ಹೊರಟು ಹಿಮಾಲಯದ ಪರ್ವತ ಶಿಖರಗಳ ಮೇಲೆ ವಿಮಾನದಲ್ಲಿ ಹಾರಾಟ ನಡೆಸುವುದನ್ನು ಮರೆಯದಿರಿ.**

★ಚಿತ್ರ- ಲೇಖನ:
**ಆರ್.ವಿಶ್ವನಾಥ್/ ಅರ್ಜುನ್ ಹಾರಿತ್**

ವಿಶಿಷ್ಟ ಸಂಸ್ಕೃತಿ ಮತ್ತು –ಭಾಷೆಯನ್ನು ಹೊಂದಿರುವ ನೇಪಾಳ, ಜಗತ್ತಿನಲ್ಲೇ ಏಕೈಕ ಹಿಂದೂ ರಾಷ್ಟ್ರ. ಪ್ರಾಕೃತಿಕವಾಗಿ ಶ್ರೀಮಂತ ದೇಶವಿದು. ಇಲ್ಲಿ ಹಿಮಚ್ಛಾದಿತ ಪರ್ವತ ಶ್ರೇಣಿಗಳದ್ದೇ ಕಾರುಬಾರು. ಇಲ್ಲಿನ ಹಿಮಾಲಯದ ಸೌಂದರ್ಯ ಎಂತಹವರನ್ನೂ ಮಾತ್ರ ಮಂತ್ರಮುಗ್ಧರನ್ನಾಗಿಸುತ್ತದೆ. ಒಮ್ಮೆ ಭೇಟಿ ನೀಡಿದವರನ್ನು ಮತ್ತೆ ಮತ್ತೆ ಸಂದರ್ಶಿಸಲು ಕೈಬೀಸಿ ಕರೆಯುತ್ತದೆ.

ನೇಪಾಳಕ್ಕೆ ಪ್ರವಾಸ ಕೈಗೊಂಡ ಪ್ರತಿಯೊಬ್ಬ ಪ್ರವಾಸಿಯೂ ಹಿಮಚ್ಛಾದಿತ ಶಿಖರಗಳನ್ನು ನೋಡಲು ಇಚ್ಛಿಸುತ್ತಾನೆ. ಅಲ್ಲದೆ ಜಗತ್ತಿನ ಅತಿ ಎತ್ತರ ಶಿಖರ ಎವರೆಸ್ಟ್ ನೋಡಲು ಕಾತರಿಸುತ್ತಾನೆ.

ನೇಪಾಳ ಪ್ರವಾಸದಲ್ಲಿ ಹಿಮಾಲಯ ಪರ್ವತ ದರ್ಶನ ಜೊತೆಗೆ, ಇತ್ತೀಚಿನ ದಿನಗಳಲ್ಲಿ ವಿಶಿಷ್ಟ ಎನಿಸಿರುವುದು ಪರ್ವತಗಳ ಮೇಲಿನ ವಾಯುವಿಹಾರ. ಪುಟ್ಟ ವಿಮಾನಗಳಲ್ಲಿ ಕುಳಿತು ಪರ್ವತಶಿಖರಗಳ ಮೇಲೆ ಹಾರಾಟ ನಡೆಸುತ್ತಾ ಆ ಶಿಕರಗಳನ್ನು ಕಣ್ತುಂಬಿಕೊಳ್ಳುವುದು ನಿಜಕ್ಕೂ ವಿಭಿನ್ನ ಅನುಭವ. ಪ್ರಪಂಚದ ಮತ್ತೆಲ್ಲೂ ಕಾಣಸಿಗದ ಅಪ್ರತಿಮ ಸೌಂದರ್ಯ ಈ ವಾಯುವಿಹಾರದಲ್ಲಿ ಸಿಗುತ್ತದೆ.

ಈ ಬಾರಿ ನೇಪಾಳಕ್ಕೆ ಭೇಟಿ ನೀಡಿದಾಗ ಎಂದಿನಂತೆ ಹೋಟೆಲಿನ ಪ್ರವಾಸ ಮಾರ್ಗದರ್ಶಿ ಹಾಗೂ ಸ್ನೇಹಿತ ದಾವಾ ಶೇರ್ಪಾ ಪರ್ವತ ವಿಹಾರ (**Mountain Flight**) ಪ್ರವಾಸ ಕೈಗೊಳ್ಳುವಂತೆ ದುಂಬಾಲು ಬಿದ್ದ. ಸರಿ ಎಂದು ಅವನ ಜತೆಗೆ ಹೊರಟೆ.

ಮುಂಜಾನೆ ಚುಮುಚುಮು ಚಳಿಯಲ್ಲಿ ಕಠ್ಮಂಡು ವಿಮಾನ ನಿಲ್ದಾಣ ತಲುಪಿದಾಗ ಪರ್ವತ ದರ್ಶನಕ್ಕೆ ಕರೆದೊಯ್ಯಲು ‘ಬುದ್ಧ’ ವಾಯು ಸಂಸ್ಥೆಯ ಪುಟ್ಟ ವಿಮಾನ **SAB– 340** ಸಿದ್ಧವಾಗಿ ನಿಂತಿತ್ತು. ನೂರಾರು ಪ್ರವಾಸಿಗರು ಪರ್ವತ ದರ್ಶನ ಹಾಗೂ ವಾಯು ವಿಹಾರಕ್ಕೆ ಸಜ್ಜಾಗಿರುವುದನ್ನು ಕಂಡು ಬೆರಗಾದೆ. ಅದಾಗಲೇ ಇಲ್ಲಿನ ಪ್ರವಾಸೋದ್ಯಮದ ಅವಿಭಾಜ್ಯ ಅಂಗವಾಗಿ ಮೌಂಟೇನ್ ಫ್ಲೈಟ್ಸ್ ಬೆಳೆದುನಿಂತಿದೆ.

ಮೊದಲೇ ಆಸನಗಳನ್ನು ಕಾಯ್ದಿರಿಸಿದ್ದರಿಂದ, ಎಲ್ಲರೂ ನಿಗದಿತ ಸ್ಥಳದಲ್ಲಿ ಕುಳಿತುಕೊಂಡರು. ಎಲ್ಲರೂ ತಮ್ಮ ಆಸನ ಪಟ್ಟಿಗಳನ್ನು ಬಿಗಿಗೊಳಿಸಿಕೊಳ್ಳಲು ಆದೇಶ ನೀಡಿದರು. ಅವತ್ತು ಹವಾಮಾನವೂ ಉತ್ತಮವಾಗಿದ್ದರಿಂದ ನಿಗದಿತ ಸಮಯಕ್ಕೆ 6:30ಕ್ಕೆ ಸರಿಯಾಗಿ 20 ಪ್ರಯಾಣಿಕರನ್ನು ಹೊತ್ತ ನಮ್ಮ ಪುಟ್ಟ ವಿಮಾನ ವಾಯುಮಂಡಲಕ್ಕೆ ಲಗ್ಗೆ ಇಟ್ಟಿತು.

ಮೊದಲಿಗೆ ಮಹಾನಗರ ಕಠ್ಮಂಡುವಿನ ಕಟ್ಟಡಗಳು ಸುಂದರವಾಗಿ ಕಂಡವು. ನಂತರ ಕಾಡು, ನದಿ, ಪರ್ವತಗಳು ಹಾಗೂ ಹಿಮಶಿಖರಗಳು ಒಂದರ ನಂತರ ಒಂದು ಕಾಣತೊಡಗಿದವು. ಕ್ಷಣಾರ್ಧದಲ್ಲೇ ಕಾಕ್‌ಪಿಟ್‌ನಲ್ಲಿನ ಉಪಕರಣದ ಮಾಪಕ ಸಮುದ್ರ ಮಟ್ಟಕ್ಕಿಂತ